1	2	3	4	5
10.	ವಿಶೇಷ ಘಟಕ ಯೋಜನೆಗೆ ವಿಶೇಷ ಕೇಂದ್ರೀಯ ಅನುದಾನ (ಕೇಂದ್ರ ವಲಯ) (ಶೇ. 100 ಕೇಂದ್ರದ ಪಾಲು)	-	-	-
	ಒಟ್ಟು	734.87	659.52	858.85
	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ			
1.	ವಿದ್ಯಾರ್ಥಿನಿಲಯ/ಆಶ್ರಮ ಶಾಲೆ ಕಟ್ಟಡ ನಿರ್ಮಾಣ	-	-	150.00
2.	ಪುಸ್ತಕ ಭಂಡಾರ	-	-	23.94
3.	ತರಬೇತಿ ಮತ್ತು ಸಂಬಂಧಿತ ಯೋಜನೆಗಳು	-	-	2.15
	ಒಟ್ಟು	-	-	176.09
	ಹಿಂದುಳಿದ ವರ್ಗಗಳ ಇಲಾಖೆ			
1.	ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ	-	-	200.00
	ಒಟ್ಟು	-	-	200.00

ಸೂಳ್ಯ ತಾಲ್ಲೂಕಿನಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ

1555 (2061) ಶ್ರೀ ಎಸ್. ಅಂಗಾರ (ಸೂಳ್ಯ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) 2002-03ನೇ ಸಾಲಿಗೆ ಪರಿಶಿಷ್ಟ ವರ್ಗ/ಪಂಗಡಗಳ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡಲಾಗಿದೆಯೇ; ಯಾವ ಜಿಲ್ಲೆಗೆ ನೀಡಿರುವುದಿಲ್ಲ?

2) ನೀಡದೇ ಇರಲು ಕಾರಣಗಳೇನು?

3) ಸುಳ್ಯ ತಾಲ್ಲೂಕಿಗೆ ಸಮವಸ್ತ್ರ ನೀಡಲಾಗಿದೆಯೇ; ಇಲ್ಲದಿದ್ದಲ್ಲಿ ಯಾವಾಗ ವಿತರಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

1. 1) ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಸಮವಸ್ತ್ರವನ್ನು ಹಾಸನ ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಿಗೆ ಭಾಗಶಃ ಒದಗಿಸಲಾಗಿದೆ.

2) ಪರಿಶಿಷ್ಟ ಪಂಗಡದ 20 ಜಿಲ್ಲೆಗಳ ವಿದ್ಯಾರ್ಥಿನಿಲಯಗಳಿಗೆ ಪೂರ್ಣ ಸರಬರಾಜು ಮಾಡಿದ್ದು 5 ಜಿಲ್ಲೆಗಳಿಗೆ ಭಾಗಶಃ ನೀಡಲಾಗಿದೆ. 2 ಜಿಲ್ಲೆಗಳಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳು ಇರುವುದಿಲ್ಲ.

2. ಸಮಾಜ ಕಲ್ಯಾಣ ಇಲಾಖೆಯು ನಡೆಸಲ್ಪಡುವ ಸಂಸ್ಥೆಗಳಿಗೆ ಅವಶ್ಯವಿರುವ ಸಿದ್ಧಪಡಿಸಿದ ಸಮವಸ್ತ್ರಗಳನ್ನು ಸರಬರಾಜು ಮಾಡಲು ರಾಜ್ಯ ಸರ್ಕಾರದ ಉದ್ಯಮವಾದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ವಹಿಸಲಾಗಿದೆ.

2002-03ನೇ ಸಾಲಿನಲ್ಲಿ ಸಿದ್ಧಪಡಿಸಿದ ಸಮವಸ್ತ್ರಗಳನ್ನು ಸರಬರಾಜು ಮಾಡಲು ಆಗಿರುವ ವಿಳಂಬಕ್ಕೆ ಸಂಸ್ಥೆಯವರು ಈ ಕೆಳಕಂಡ ಕಾರಣಗಳನ್ನು ನೀಡಿರುತ್ತಾರೆ:

1) ಇಲಾಖೆಯ ಸಂಸ್ಥೆಗಳ ಬೇಡಿಕೆಯ ಪ್ರಕಾರ ವಿವಿಧ ಬಣ್ಣದ ಹಾಗೂ ವಿವಿಧ ವಿನ್ಯಾಸದ ಬಟ್ಟೆಗಳನ್ನು ತಯಾರಿಸಲು ತುಂಬಾ ತೊಡಕುಗಳಿದ್ದು ವಿಳಂಬಕ್ಕೆ ಕಾರಣವಾಗಿರುತ್ತದೆ.

2) ಸಮವಸ್ತ್ರಗಳಿಗೆ ಅವಶ್ಯವಿರುವ ಹತ್ತಿ ನೂಲು ಹಾಗೂ ಇನ್ನಿತರ ಕಚ್ಚಾ ಸಾಮಗ್ರಿಗಳ ಬೆಲೆಯು ಬರ ಪರಿಸ್ಥಿತಿಯಿಂದಾಗಿ ಹೆಚ್ಚಳವಾಗಿರುತ್ತದೆ.

3. ಸುಳ್ಯಾ ತಾಲ್ಲೂಕಿನಲ್ಲಿರುವ ವಿದ್ಯಾರ್ಥಿನಿಲಯಗಳಿಗೆ ಸಮವಸ್ತ್ರವನ್ನು ವಿತರಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ವರ್ಗಗಳ ಹಾಸ್ಟೆಲ್ ಹಾಗೂ ಆಶ್ರಮ ಶಾಲೆಗಳ ನಿರ್ವಹಣಾ ವೆಚ್ಚ

1556 (2062) ಶ್ರೀ ಎಸ್. ಅಂಗಾರ (ಸೂಳ್ಯ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ವರ್ಗಗಳ ಹಾಸ್ಟೆಲ್ ಹಾಗೂ ಆಶ್ರಮ ಶಾಲೆಗಳಿಗೆ 2002-03ರಲ್ಲಿ ಎಷ್ಟು ನಿರ್ವಹಣೆ ವೆಚ್ಚ ನೀಡಬೇಕಾಗಿತ್ತು; ಎಷ್ಟು ನೀಡಿದೆ?

ಆ) ನೀಡದೇ ಇದ್ದಲ್ಲಿ ಯಾವಾಗ ನೀಡಲಾಗುವುದು?

ಇ) ಸುಳ್ಯ ತಾಲ್ಲೂಕಿಗೆ ಎಷ್ಟು ನೀಡಬೇಕಾಗಿದೆ; ಯಾವಾಗ ನೀಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) (ರೂ. ಲಕ್ಷಗಳಲ್ಲಿ)

	ಆಶ್ರಮ ಶಾಲೆಗೆ	ಪ.ವಿದ್ಯಾರ್ಥಿ ನಿಲಯಕ್ಕೆ
ಬಿಡುಗಡೆ ಮಾಡಬೇಕಾದ ಮೊತ್ತ	41.56	15.58
ಬಿಡುಗಡೆ ಮಾಡಲಾಗಿರುವ ಮೊತ್ತ	30.90	8.11

ಆ) ಇನ್ನೂ ನೀಡಬೇಕಾದ ಬಾಕಿ ಅನುದಾನದ ಬಗ್ಗೆ ಜಿಲ್ಲಾ ಪಂಚಾಯತಿಯಿಂದ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸೂಳ್ಯ ತಾಲ್ಲೂಕಿಗೆ ರೂ. 10.19 ಲಕ್ಷ ನೀಡಬೇಕಾಗಿದ್ದು, ಈಗಾಗಲೇ ರೂ. 9.13 ಲಕ್ಷಗಳನ್ನು ನೀಡಲಾಗಿದೆ. ಇನ್ನೂ ಬಾಕಿ ರೂ. 1.06 ಲಕ್ಷಗಳನ್ನು ಜಿಲ್ಲಾ ಪಂಚಾಯತಿಯಿಂದ ಬಿಡುಗಡೆ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಹಾಯ

1557 (2031) ಶ್ರೀ ಆರಗಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ನೀಡಬೇಕಾಗಿರುವ ಸಹಾಯಧನ ಎಷ್ಟು? ಬಾಕಿ ಇದೆ. ಯಾವ ಸಾಲಿನಿಂದ ಬಾಕಿ ಇವೆ: (ಪ್ರತಿ ಸಾಲಿನ ಬಾಕಿ ಹಣದ ವಿವರ ಒದಗಿಸುವುದು)

ಆ) ಈ ಬಾಕಿ ಹಣ ಪಾವತಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?